**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟ, ಉಪಸ್ಥಿತಿ- ಜಮಖಂಡಿ</u>**

**ಸೇಷನ್ಸ್ ಕೇಸ್ ನಂ. 5080/2022**
**ಪಿಡಬ್ಲ್ಯೂ-2**
**ಸಿಡಬ್ಲ್ಯೂ- 3**

ಹೆಸರು : ಚಿನ್ನಪ್ಪ ತಂದೆ ಅಪ್ಪಾರಾಯ ಎಂಟೆತ್ತ

ವಯಸ್ಸು : 45 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಕುಂಬಾರಹಳ್ಳ, ತಾಃ ಜಮಖಂಡಿ

====

**<u>ಸಾಕ್ಷಿಗೆ ಇಂದು ದಿನಾಂಕ 02.04.2024 ರಂದು ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ</u>**

ಈಗ ತೋರಿಸುತ್ತಿರುವ ನಿ.ಪಿ.2 ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರ್ತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿರುವುದಿಲ್ಲ ಮತ್ತು ಯಾವುದೇ ಮುದ್ದೆಮಾಲು ವಶಪಡಿಸಿಕೊಂಡಿರುವುದಿಲ್ಲ. ನಿ.ಪಿ.2 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಪ್ರಸ್ತುತ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ</u>**

2. ದಿನಾಂಕ 31.03.2020 ರಂದು ಬೆಳಿಗ್ಗೆ 10.00 ಗಂಟೆಗೆ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ, ಜಮಖಂಡಿ ನಗರದ ವಿಜಯಪೂರ ರಸ್ತೆಗೆ ಬರುವ ಮಿಲನ ಧಾಬಾದ ಬಳಿ ಸಾರ್ವಜನಿಕ ರಸ್ತೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸರಾಯಿ ಮಾರಾಟವಾಗುತ್ತಿದ್ದು, ದಾಳಿಗೆ ಪಂಚನಾಗಿ ಭಾಗವಹಿಸಬೇಕೆಂದು ಸೂಚಿಸಿದ್ದು, ಅದಕ್ಕೆ ಒಪ್ಪಿ ಬೆಳಿಗ್ಗೆ 10.45 ಕ್ಕೆ ಠಾಣೆಯಿಂದ ಹೊರಟು, 11.00 ಗಂಟೆ ಸುಮಾರಿಗೆ ಬಾತ್ಮಿ ಸ್ಥಳದ ಬಳಿ ದೂರದಲ್ಲಿ ನಿಂತು ಮರೆಯಲ್ಲಿ ನೋಡಲಾಗಿ, ನ್ಯಾಯಾಲಯದ ಮುಂದಿರುವ ಆರೋಪಿ ಒಂದು ಪ್ಲಾಸ್ಟಿಕ್ ಚೀಲ ಹಿಡಿದುಕೊಂಡು ಅದರಿಂದ

ಸರಾಯಿ ಪ್ಯಾಕೇಟುಗಳನ್ನು ತೆಗೆದು, ಜನರಿಗೆ ಕೊಡುತ್ತಿದ್ದುದು ಕಂಡುಬಂದಿದ್ದು, ಪೋಲಿಸರು ಆತನನ್ನು ಸುತ್ತುವರೆದು ಹಿಡಿದು, ಆತನ ಬಳಿಯಿಂದ ಸುಮಾರು 139 ಕಳ್ಳಭಟ್ಟಿ ಸರಾಯಿ ಪ್ಯಾಕೇಟುಗಳನ್ನು ವಶಪಡಿಸಿಕೊಂಡು, 4 ಸರಾಯಿ ಪ್ಯಾಕೇಟುಗಳಿಂದು ಒಂದು ಬಾಟಲಿಯಲ್ಲಿ ಪ್ರತ್ಯೇಕವಾಗಿ ಮು.ಮಾ.1 ರಂತೆ ಮಾದರಿ ತೆಗೆದು, ಆರೋಪಿಯಿಂದ ಸರಾಯಿ ಮಾರಾಟದಿಂದ ಬಂದ ಹಣ 38,230/- ರೂ.ಗಳನ್ನು ವಶಪಡಿಸಿಕೊಂಡು, ನಿ.ಪಿ.2 ರಂತೆ ಪಂಚನಾಮೆ ಬರೆದು, ಅದನ್ನು ಓದಿ ತಿಳಿಸಿ, ಅದಕ್ಕೆ ನನ್ನ ಸಹಿ ಪಡೆದಿದ್ದಾರೆ ಅಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಇರುವುದಿಲ್ಲ

ಮರುವಿಚಾರಣೆಃ- ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ. ಸರಿ ಅದೆ.

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.